ನಾ ವಹ್ ಮರೈ, ನ ಜಲ್ ಬುಝೈ,ಐಸೆ ಸಂಗ್ ದಯಾಳ್!

ದಾದು (ಎಂಬ) ಸತಿ ಸೃಷ್ಟಿಕರ್ತನಿಂದ ದೂರವಾಗಿ, ವಿರಹಜ್ವಾಲೆಯಲ್ಲಿ ಬೇಯುತ್ತಿದ್ದಾಳೆ;
ಅವಳು ಸಾಯುವುದೂ ಇಲ್ಲ, ಜ್ವಾಲೆಯು ಆರುವುದೂ ಇಲ್ಲ – ಹೀಗಿದೆ ದಯಾಳುವಿನ ಸಂಗ.

8. ಕೌಣ್ ಬಿಧಿ ಪಾಯಿಯೆ ರೆ, ಮೀತ್ ಹಮಾರಾ ಸೋಇ

ಪಾಸ್ ಪೀವ್ ಪರದೇಸ್ ಹೈ ರೆ, ಜಬ್ ಲಗ್ ಪ್ರಗಟೈ ನಾಹಿ ।
ಬಿನ್ ದೇಖೆ ದುಖ್ ಪಾಯಿಯೆ, ಯಹ್ ಸಾಲೈ ಮನ್ ಮಾಹಿ ॥
ಜಬ್ ಲಗ್ ನೈನ್ ನ ದೇಖಿಯೆ, ಪರ್ಗಟ್ ಮಿಲೈ ನ ಆಯಿ ।
ಏಕ್ ಸೇಜ್ ಸಂಗ್‌ಹಿ ರಹೈ, ಯಹ್ ದುಖ್ ಸಹ್ಯಾ ನ ಜಾಯಿ ॥
ತಬ್ ಲಗ್ ನೆಡೆ ದೂರಿ ಹೈ, ಜಬ್ ಲಗ್ ಮಿಲೈ ನ ಮೋಹಿ ।
ನೈನ್ ನಿಕಟ್ ನಾಹಿ ದೇಖಿಯೆ, ಸಂಗಿ ರಹೆ ಕ್ಯಾ ಹೋಯಿ ॥
ಕಹಾ ಕರೌ ಕೈಸೆ ಮಿಲೈ ರೆ, ತಲಫೈ ಮೆರಾ ಜೀವ್ ।
ದಾದು ಆತುರ್ ಬಿರಹಿನೀ, ಕಾರಣ ಅಪನೆ ಪೀವ್ ॥



ನಮ್ಮ ಗೆಳೆಯನನ್ನು ಭೇಟಿ ಮಾಡಲು ನಾನು ಯಾವ ಯಾವ ಉಪಾಯವನ್ನು ಮಾಡಲಿ?

ನನ್ನ ಪ್ರಿಯಕರನು ಪರದೇಶದಲ್ಲಿದ್ದಾನೆ, ಅವನಿನ್ನೂ ಕಾಣಲು ಸಿಕ್ಕಿಲ್ಲ ।
ಈ ವರ್ಷ, ಅವನನ್ನು ನೋಡದೆಯೇ ಮನಸ್ಸಿನಲ್ಲಿಯೇ ಕೊರಗುತ್ತಿರಬೇಕು ॥
ಕಣ್ಣುಗಳಿಂದ ನೋಡದೇ ಹೋದರೆ, ಅವನು ನನ್ನ ಜೊತೆ ಇದ್ದಂತೆಯೇ ಅಲ್ಲ ।
ಹಾಸಿಗೆಯ ಮೇಲೆ ಅವನು ನನ್ನೊಡನಿದ್ದರೂ, ಈ ದುಃಖವನ್ನು ಸಹಿಸಲಾಗುವುದಿಲ್ಲ ॥
ನನ್ನನವನು ಸಂಧಿಸದಿದ್ದರೆ, ಅವನು ನನ್ನಿಂದ ದೂರವಿದ್ದಂತೆಯೇ ।
ಹತ್ತಿರದಿಂದ ಅವನನ್ನು ಕಾಣದಿದ್ದರೆ, ಜೊತೆಯಲ್ಲಿದ್ದೂ ಏನು ಪ್ರಯೋಜನ? ॥
ಏನು ಮಾಡಲಿ? ಅವನನ್ನು ಹೇಗೆ ಕೂಡಲಿ? ನನ್ನ ಬದುಕು ವ್ಯರ್ಥವಾಗುತ್ತಿದೆ ।
ದಾದು ಈ ಬಗೆಯ ತುಡಿತವಿರುವ ವಿರಹಿಣಿ; ಕಾರಣ: ತನ್ನ ಪ್ರಿಯಕರ ॥

9. ಇಹೈ ಪರಮ್ ಗುರು ಯೋಗಂ , ಅಮೀ ಮಹಾರಸ್ ಭೋಗಾ
ಮನ್ ಪವನಾ ಸ್ಥಿರ್ ಸಾಧಂ, ಅವಿಗತ ನಾಥ್ ಆರಾಧಂ, ತಹಾ ಶಬ್ದ್ ಅನಾಹದ ನಾದಂ ।1।
ಪಂಚ ಸಖೀ ಪರಮೋದಂ, ಅಗಮ ಜ್ಞಾನ್ ಗುರು ಬೋಧಂ, ತಹ ನಾಥ್ ನಿರಂಜನ ಶೋಧಮ್
।2।
ಸದ್ಗುರು ಮಾಹಿ ಬತಾವಾ, ನಿರಾಧಾರ್ ಘರ್ ಛಾವಾ, ತಹ ಜ್ಯೋತಿ ಸ್ವರೂಪೀ ಪಾವಾ ।3।
ಸಹಜೈ ಸದಾ ಪ್ರಕಾಶಂ, ಪೂರಣ್ ಬ್ರಹ್ಮ ವಿಲಾಸಂ, ತಹ ಸೇವಕ್ ದಾದು ದಾಸಂ ।4।
ಇಲ್ಲಿದೆ ಪರಮ ಗುರುವಿನ ಯೋಗ, ಪರಮ ಅಮೃತದ ಭೋಗ
ನಿನ್ನ ಮನಸ್ಸನ್ನು ಮತ್ತು ಉಸಿರನ್ನು ಸ್ಥಿರವಾಗಿಸು, ಅಜ್ಞೇಯ ನಾಥನನ್ನು ಪೂಜಿಸು, ಆಗ ನಿನಗೆ
ಪವಿತ್ರ ಅನಾಹತ ಚಕ್ರದ ಅವಿರತ ನಾದವು ಕೇಳಿಸುತ್ತದೆ ।1।
ಯಾವಾಗ ಗುರುವು ನಿನಗೆ ಅಗಾಧ ಜ್ಞಾನವನ್ನು ಕರುಣಿಸುತ್ತಾನೋ, ಆಗ ಇಂದ್ರಿಯಗಳ ಐದು